



**ಹಳೆಯ ಮತ್ತು ಹೊಸ ದುಬೈ ಈ ಕಟ್ಟಡದ ಎರಡು ದಿಕ್ಕುಗಳಿಂದ ಪ್ರತ್ಯೇಕವಾಗಿ ಕಾಣುತ್ತದೆ. ಈ ಅದ್ಭುತ ವಾಸ್ತುಶಿಲ್ಪವನ್ನು ನಿರ್ಮಿಸಲು ಸ್ಥಳ ಆಯ್ಕೆ ಮಾಡಿದವರ ಜಾಣ್ಮೆಯನ್ನು ಮೆಚ್ಚಲೇಬೇಕು.**

■ ಚಿತ್ರ– ಲೇಖನ: **ವೆಂಕಟೇಶ ಮುದಗಲ್**

ಯುನೈಟೆಡ್ ಅರಬ್ ಎಮಿರೆಟ್ಸ್ (ಯುಎಇ) ನ ಅತ್ಯಂತ ಜನಪ್ರಿಯ ನಗರ ದುಬೈ. ವಿಶ್ವವಿಖ್ಯಾತ ಪ್ರಮುಖ ವಾಣಿಜ್ಯ ಕೇಂದ್ರ ಮತ್ತು ಪ್ರವಾಸಿಗರ ಪಾಲಿನ ಸ್ವರ್ಗ. ಹೊಸತನಕ್ಕೆ ಸದಾ ತನ್ನನ್ನು ಒಡ್ಡಿಕೊಂಡಿರುವ ಈ ನಗರ ಬೆರಗುಗೊಳಿಸುತ್ತದೆ. ಸಹೋದರ ರಮೇಶನ ಪ್ರೀತಿ ಪೂರ್ವಕ ಆಹ್ವಾನಕ್ಕೆ ಕಳೆದ ಜನವರಿಯಲ್ಲಿ ದುಬೈಗೆ ಭೇಟಿ ನೀಡಿದೆ.

ಜೇಬು ತುಂಬ ಹಣ ಇಟ್ಟುಕೊಂಡು ಸುತ್ತಾಡುವವರಿಗೆ ದುಬೈ ಆಕರ್ಷಣೀಯ ನಗರ. ಹಲವಾರು ಪ್ರವಾಸಿ ತಾಣಗಳಿಂದ ಈ ನಗರ ಪ್ರಸಿದ್ಧಿಯಾಗಿದೆ. ಅಂತೆಯೇ, ವಿಶ್ವದಾದ್ಯಂತ ಜನ ಇಲ್ಲಿಗೆ ಬರಲು ತವಕಿಸುತ್ತಾರೆ. ಬುರ್ಜ್ ಖಲೀಫಾ, ಮಿರಾಕಲ್ ಗಾರ್ಡನ್, ಡೆಸರ್ಟ್ ಸಫಾರಿ, ಮರೀನಾ, ಗ್ಲೋಬಲ್ ವ್ಹಿಲೇಜ್ ಹೀಗೆ ಹತ್ತು ಹಲವಾರು ಆಕರ್ಷಣೆಯ ಆಗರ ದುಬೈ ನಗರ.

ಈ ಸಾಲಿಗೆ ಇತ್ತೀಚೆಗೆ ಸೇರ್ಪಡೆಯಾದದ್ದು ದುಬೈ ಫ್ರೇಮ್. ಏನೇ ಮಾಡಿದರೂ ಭಿನ್ನವಾಗಿ ಮಾಡುವ ಇಲ್ಲಿನ  ಮೂಲ ನಿವಾಸಿಗಳಾದ ಎಮಿರಾಟಿಗಳ ಛಲಕ್ಕೆ ನಿಜಕ್ಕೂ ಮಾರು ಹೋದೆ. ಇಲ್ಲಿನ ಝುಬೆಲ್ ಪಾರ್ಕನಲ್ಲಿ ತಲೆ ಎತ್ತಿ ನಿಂತಿರುವ ಈ ಫ್ರೇಮ್‌ನ ಎತ್ತರ 150 ಮೀಟರ್. ಎರಡು ಟವರ್‌ಗಳನ್ನು 93 ಮೀಟರ್ ಅಗಲದ 100 ಚದರ ಮೀಟರ್‌ನ ಫ್ರೇಮ್ ಬಂಧಿಸಿಕೊಂಡಿದೆ. ವಾಸ್ತುಶಿಲ್ಪದ ಕುರಿತು ಕುತೂಹಲ ಇರುವ ಎಲ್ಲರೂ ಈ ಕಟ್ಟಡದ ಬಗ್ಗೆ ಬೆರಗಿನ ಮಾತುಗಳನ್ನೇ ಆಡುತ್ತಾರೆ.

ಮೇಲೆ ಹೋಗಲು ಲಿಫ್ಟ್ ಇದೆ. 93 ಮೀಟರ ಅಗಲದ ಫ್ರೇಮ್‌ನಲ್ಲಿ 25 ಚದರ ಮೀಟರ ಪಾರದರ್ಶಕ ಗಾಜನ್ನು ಅಳವಡಿಸಲಾಗಿದೆ. ಈ ಗಾಜಿನ ಮೇಲೆ ನಡೆಯುತ್ತಾ 150 ಮೀಟರ್‌ನಷ್ಟು ಎತ್ತರದಿಂದ ಕೆಳಗಿನ ಸ್ಥಳವನ್ನು ವೀಕ್ಷಿಸುವುದೇ ಒಂದು ವಿಶಿಷ್ಟ ಅನುಭವ. ಕೆಲವರಿಗೆ ತಲೆ ಸುತ್ತು ಬರುವ ಸಾಧ್ಯತೆಗಳೂ ಇದೆ. ಮೇಲೆ ಹೋಗಿ ಫ್ರೇಮ್‌ನ ಇನ್ನೊಂದು ಬದಿಯಿಂದ ನೋಡಿದಾಗ ಹಳೆ ದುಬೈನಗರದ ಡಯರಾ, ಉಮ್ ಹರಾರೆ, ಕರಾಮಾ ಪ್ರದೇಶಗಳ ನೋಟ ಕಾಣುತ್ತದೆ. ಇನ್ನೊಂದು ಬದಿಯಿಂದ ವೀಕ್ಷಿಸಿದಾಗ, ಎಮಿರೇಟ್ಸ್ ಟವರ್, ಬುರ್ಜ್ ಖಲೀಫಾ ಸೇರಿದಂತೆ ಅತ್ಯಾಧುನಿಕ ದುಬೈ ನಗರ ಕಾಣುತ್ತದೆ. ಈ ಕಟ್ಟಡ ನಿರ್ಮಿಸಲು ಇಂತಹ ಸ್ಥಳ ಆಯ್ಕೆ ಮಾಡಿದವರ ಜಾಣ್ಮೆಗೆ ತಲೆದೂಗಲೇಬೇಕು.

ವೀಕ್ಷಣೆ ಮುಗಿಸಿ ಇನ್ನೊಂದು ಭಾಗದಿಂದ ಇಳಿದ ನಂತರ, ಒಂದು ಕಾಲದಲ್ಲಿ ಮತ್ಸ್ಯೋದ್ಯಮ ಮಾತ್ರ ಹೊಂದಿದ್ದ ದುಬೈ ಅತ್ಯಾಧುನಿಕ ನಗರವಾಗಿ ಬೆಳೆದ ಬಗ್ಗೆ ಪ್ರದರ್ಶಕಗಳಿರುವ ಮ್ಯೂಸಿಯಂ ಗಮನ ಸೆಳೆಯುತ್ತದೆ. ದುಬೈ ಫ್ರೇಮ್ ಅನ್ನು ಖ್ಯಾತ ವಾಸ್ತುಶಿಲ್ಪಿ ಫರ್ನಂಡೊ ಡೊನಿಸ್(Fernando Donis) ವಿನ್ಯಾಸಗೊಳಿಸಿದ್ದಾರೆ ಎನ್ನಲಾಗಿದೆ. ಕಟ್ಟಡದ ಹೊರ ಕವಚ ಅತ್ಯಂತ ಸುಂದರವಾಗಿದ್ದು ‘ಎಕ್ಸ್‌ಪೋ 2020’ಯಿಂದ ಪ್ರೇರಿತವಾಗಿದೆ ಎಂದು ಹೇಳುತ್ತಾರೆ.

ದುಬೈ ಫ್ರೇಮ್ ನಿರ್ಮಾಣಕ್ಕೆಂದು 160 ದಶಲಕ್ಷ ದಿರಹಮ್ (ಸುಮಾರು 288 ಕೋಟಿ ರೂಪಾಯಿ) ವೆಚ್ಚ ಮಾಡಲಾಗಿದೆ. ಕೊಲ್ಲಿ ದೇಶದ ಜನರಿಗೆ ಅತ್ಯಂತ ಅಗಾಧವಾದದ್ದನ್ನು ನಿರ್ಮಿಸುವ ವಿಶೇಷ ಅಭಿರುಚಿ ಒಲಿದಂತಿದೆ. ಇಲ್ಲಿಗೆ ಪ್ರವೇಶ ದರ 50 ದಿರಹಮ್ ಇದ್ದು  60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ವಿನಾಯಿತಿ ಇದೆ. ವಯಸ್ಸಾಗಿದೆ ಎನ್ನಲು ಪುರಾವೆಗಾಗಿ ಪಾಸ್‌ಪೋರ್ಟ್ ತೋರಿಸುವುದು ಅನಿವಾರ್ಯ. ●